March 2013

# ಕಾನನ

ನಿಸರ್ಗದೆಡೆಗೆ ಪಯಣ



Wildlife Conservation Group

©WCG

# ಕಾನನ

MARCH 2013

ನಿಸರ್ಗದೆಡೆಗೆ ಪಯಣ



* ಗೌಜಲ ಮರ
* ನಾಗನ ಕ್ಷಮಾಧಾನ
* ಹಕ್ಕಿಲೋಕ
* ವಿವಿ ಅಂಕಣ
* ತೈಲವಿದ್ದಂತೆ ಹಣ

ಸಂಪಾದಕರು : ಅಶ್ವಥ ಕೆ.ಎನ್

ವಿನ್ಯಾಸ : ಕೃಷ್ಣ ಎಸ್

ಲೇಖಕ ವೃಂದ : ಶಂಕರಪ್ಪ ಕೆ.ಪಿ, ನಾಗೇಶ್ ಓ.ಎಸ್
ಅಶ್ವಥ ಕೆ.ಎನ್, ಸುಗುಣಮಹೇಶ್.

ಕರಡು ತಿದ್ದುಪಡಿ: ಮುರಳಿ.ಎಸ್

ವೈಜ್ಞಾನಿಕ ನೆರವು: ಅರುಣ್ ಸಿಂಗ್

ಮುಖಪುಟ : ಗೌಜಲ ಹೂ.

kaanana.mag@gmail.com

# ಸಂಪಾದಕೀಯ

ಭೂಮಿಗೊಂದು ಗಂಟೆ ಎಂಬ ಪರಿಕಲ್ಪನೆಯಲ್ಲಿ ಮನೆಯ, ಬೀದಿಯ, ದೀಪಗಳನ್ನು ಒಂದು ಗಂಟೆಯ ಕಾಲ ನಂದಿಸಿ, ಹೆಚ್ಚುತ್ತಿರುವ ಶಕ್ತಿಮುಗ್ಗಟ್ಟಿನ ಬಗ್ಗೆ ಹಾಗು ಭೂಮಿಯ ಹಲವು ನೈಸರ್ಗಿಕ ಸಂಪತ್ತನ್ನು ಸಂರಕ್ಷಿಸುವ ದೃಷ್ಟಿಕೋನದಿಂದ ಸಾಂಕೇತಿಕವಾಗಿ ವಿಶ್ವದಾದ್ಯಂತ ಈ ತಿಂಗಳು ***ಅರ್ಥ್ ಅವರ್*** ಅನ್ನು ಆಚರಿಸಿದ್ದೇವೆ.

ಹೆಚ್ಚುತ್ತಿರುವ ಜನಸಂಖ್ಯೆ, ಬರಿದಾಗುತ್ತಿರುವ ಅಂತರ್ಜಲ, ಬಾರದಮಳೆ, ಬರಿದಾದ ಅಣೆಕಟ್ಟು, ಹೀಗೆ ನಿರುತ್ಸಾಹ ಮಾಡಿರುವ ದೃಶ್ಯಗಳು, ಕಣ್ಣ ಮುಂದೆ ಸಾಲು ಸಾಲು ಕಾಣುತ್ತಿವೆ. ಮನುಷ್ಯರಾದ ನಾವೆಲ್ಲರು ಅಮೇರಿಕಾದಂತಹ ಮುಂದುವರಿದ ರಾಷ್ಟ್ರಗಳ ಜೀವನ ಶೈಲಿಯನ್ನೇ ಅಂಧಾನುಕರಣೆ ಮಾಡದೆ, ಸಾವಯವವಾಗಿ ಬದುಕುವುದನ್ನು ಕಲಿಯುವ ಅವಶ್ಯಕತೆ ಎಂದಿಗಿತ್ತ ಇಂದು ತುಂಬಾ ಇದೆ.

***ಗಾಂಧೀಜಿ***ಯವರ ಸರಳ ಜೀವನವನ್ನು, ಅಷ್ಟೆ ಏಕೆ ಗಾಂಧೀಯನ್ನೇ ಮರೆತು. ಸತ್ಯವನ್ನು ತಿಳಿಯುವ ವಿವೇಕವನ್ನೇ ಕಳೆದುಕೊಂಡಿದ್ದೇವೇನೋ ಎಂದು ಕೆಲವೊಮ್ಮೆ ಅನಿಸಿದರೂ, ಏಲ್ಲೋ ಮುಂಗಾರಿನ ಮಳೆಯಂತೆ ಆಶಾವಾದ ಇನ್ನೂ ಉಳಿದಿದೆ. ನಾವು ಪ್ರಕೃತಿ, ಭೂಮಿ, ಕೆರೆ, ನದಿ, ಪ್ರಾಣಿ-ಪಕ್ಷಿಗಳನ್ನು, ಗಿಡ-ಮರಗಳ ಬಗ್ಗೆ ತಿಳಿದು, ಅವುಗಳನ್ನು ಸಂರಕ್ಷಿಸಲು ಕಾರ್ಯ ಪ್ರವೃತ್ತರಾಗಲು ಇದೆ ಸರಿಯಾದ ಸಮಯ.

**ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.**



**ಇ-ಮೇಲ್ ವಿಳಾಸ :**

kaanana.mag@gmail.com


**Wildlife Conservation Group**



# ಗೌಜಲ ಮರ

**ವೈಜ್ಞಾನಿಕ ಹೆಸರು**: ***Careya arborea***

**ಇಂಗ್ಲೀಷ್ ಹೆಸರು**: **Wild guava**




ಹಿತ್ತಲ ಗಿಡ ಮದ್ದಲ್ಲ ಎಂಬಂತೆ ಎಷ್ಟೋ ವೇಳೆ ನಮ್ಮ ಸುತ್ತಮುತ್ತ, ರಸ್ತೆಯ ಬದಿಯಲ್ಲಿ, ಹಿತ್ತಲಿನಲ್ಲೇ ಇರುವ ಸಸ್ಯ ವೈವಿಧ್ಯವನ್ನು ನಾವು ಗಮನಿಸುವುದಿಲ್ಲ. ನಮ್ಮ ಗಮನಗಳೇ ಬೇರೆ, ಒಮ್ಮೆ ಶಾಲೆಗೆ ನಡೆದು ಹೋಗುವಾಗ ದಾರಿಯ ಎರಡೂ ಬದಿಯಲ್ಲಿ ಇದ್ದ ಹಚ್ಚಹಸಿರಿನ ವನರಾಶಿಯನ್ನು ಕಂಡು . ದಾರಿಯುದ್ದಕ್ಕು ಮಾಡಲೂ ನೋಡಲೂ ಏನೂ ಇಲ್ಲದಿದ್ದರಿಂದ ನನಗೆ ನಾನೇ ಒಂದು ಕೆಲಸಕೊಟ್ಟಿಕೊಂಡೆ. ದಾರಿಯ ಹಿಕ್ಕೆಲಗಳಲ್ಲಿ ಕಾಣುವ ಪ್ರತಿಯೊಂದು ವಿಧದ, ವಿವಿಧ ಆಕಾರದ ಎಲೆಗಳನ್ನು ನೋಡುತ್ತಾ ಗಮನಿಸುತ್ತ ನಡೆದೆ. ಎರಡು ಕೀಲೊ ಮೀಟರ್ ದೂರದ ಶಾಲೆಯನ್ನು ತಲುಪುವಷ್ಟರಲ್ಲಿ ಬರೋಬ್ಬರಿ ತೊಂಬ್ಬತ್ತಾರು ವಿಧದ ಎಲೆಗಳನ್ನು ಗುರುತಿದುಸಿ ಕಳೆದುಹೋದೆ. ಇದನ್ನೇ ಬಂಡವಾಳವಾಗಿಸಿಕೊಂಡು ಗೆಳೆಯರೊಂದಿಗೆ ಚರ್ಚಿಸಿದೆ. ಶಾಲೆಯಲ್ಲಿ ಎಲೆಗಳ ಪ್ರದರ್ಶನ ಏರ್ಪಡಿಸಿದೆ. ಮಕ್ಕಳು ಬಂದವು, ನೋಡಿದವು, ಮುಟ್ಟಿದವು, ಎಣಿಸಿದವು, ನಕ್ಕವು ಹೋದವು.

ನಮ್ಮ ತೋಟಕ್ಕೆ ಕೊಳ್ಳೆಗಾಲದ ಕಡೆಯಿಂದ ಕೂಲಿ ಮಾಡಲು ಹೊಸದಾಗಿ ಬಂದ ಪುಟ್ಟಮಾದ ಮತ್ತು ಅವನ ಹೆಂಡತಿ ಚುಂಚಿ ಹಾಗು ಇವರ ಏಕೈಕ ಪುತ್ರ ಕೈಕಾಲು ಸಣ್ಣ ಹೊಟ್ಟೆ ಡುಮ್ಮಣ್ಣನಾದ ಚಿಕ್ಕನೂ ಬೆಳಿಗ್ಗೆ ಏಳು ಗಂಟೆಯ ನಾಷ್ಟಕ್ಕೆ ನಮ್ಮ ತೋಟದಲ್ಲೇ ಕಾಡುಕೋಳಿ ಬೇಟೆಯಾಡುತ್ತಿದ್ದರು. " ಏ. . . ಅಲ್ಲಿ ಹೋಯ್ತು ನೋಡೋ . . .ಆ ಬೇಲಿಗೆ ಹೋಯ್ತು ಇಡ್ಕೋಳೋ. . ." ಎಂದು ಕೂಗಾಡುತ್ತಾ ಸಕುಟುಂಬ ಸಮೇತರಾಗಿ ಕಾಡುಕೋಳಿ ಬೇಟೆ ನಡೆಸುತ್ತಿದರು.


ಬಿದಿರು ಮೆಳೆಯ ತುದಿಯಲ್ಲಿ ಕುಳಿತ ಸಣ್ಣ ಕೋಳಿ ಮರಿಗೆ ಗುರಿಯಿಟ್ಟು ಕಲ್ಲನ್ನು ಬಿಸಿಯೇ ಬಿಟ್ಟಳು ಚುಂಚಿ. ಕಲ್ಲಿನ ಹೊಡೆತ ತಪ್ಪಿಸಿಕೊಂಡ ಕಾಡುಕೋಳಿ ಮರಿಯು ಪುರ್ರನೇ ಹಾರಿ ಗೌಜಲ ಮರದ ಪಕ್ಕದಲ್ಲಿನ ಬಿದಿರು ಮೆಳೆಯಲ್ಲಿ ಅಡಗಿಕೊಂಡಿತ್ತು.

“ಆ ಸಣ್ಣ ಮರಿ ಮಾಂಸ ಮೂರುಜನಕ್ಕೆ ಸಾಲ್ತದಾ ಪಾಪಬಿಟ್ಬಿಡಿ” ಎಂದು ನಾನು ಹೇಳಿದೆ. ಮೊದಲೇ ಬೇಟೆ ತಪ್ಪಿ ಕೋಪಗೊಂಡಿದ್ದ ಚುಂಚಿಯೂ ಸಣ್ಣ ಕೋಳಿಮರಿಯನ್ನು ಹಿಡಿಯಲು ಆಗದ ಗಂಡನನ್ನು ಉಗಿದು ಬೈದುಕೊಂಡು ಹೋದಳು.

ಗೌಜಲ ಮರದ ಬಳಿ ಪುರ್ರನೇ ಹಾರಿ ಮಾಯವಾದ ಕಾಡುಕೋಳಿ ಮರಿಯನ್ನು ಹುಡುಕಿದೆ. ಆ ಚುಂಚಿ - ಪುಟ್ಟನಿಗೆ ಸಿಗದ ಅದು ನನಗೆಲ್ಲಿ ಸಿಗಬೇಕು. ಮೂರ್ನಾಲ್ಕು ಅಡಿ ಆಳದ ಮಣ್ಣನ್ನು ಬಗೆದರೂ ಒಂದನಿ ನೀರಿಲ್ಲದ ಈ ಕಡು ಬೇಸಿಗೆಯಲ್ಲೂ ಈ ಗೌಜಲ ಮರ ಮಾತ್ರ ಬಟ್ಟಲು ಗಾತ್ರದ ಬಿಳಿ ಹೂಗಳನ್ನು ಬಿಟ್ಟು ಮೈದುಂಬಿಕೊಂಡಿತ್ತು. ತೆಳು ಹಳದಿ ಮಿಶ್ರಿತ ಹಸಿರು ಬಣ್ಣವನ್ನೊಳಗೊಂಡ ಹೂಗಳ ಗುಚ್ಛಗಳಿದ್ದವು. ಒಂದೇ ಹೂವದಲ್ಲಿ ಅಸಂಖ್ಯ ಕೇಸರಗಳಿದ್ದು, ದಳದ ಉದ್ದದ ಎರಡು ಪಟ್ಟು ಉದ್ದವಾಗಿತ್ತು . ತಾಮ್ರವರ್ಣದಿಂದ ಕೂಡಿದ ಕೆಲವು ಸರಳ ಚಿಗುರೆಲೆಗಳು ಮರಕ್ಕೆ ಸೊಬಗನಿತ್ತು ಕಂಗೊಳಿಸುವಂತೆ ಮಾಡಿತ್ತು.


ಬೆಳಿಗ್ಗೆ ಜೋತ್ತಿದ್ದ ಬಿಳಿ ಹೂಗಳು ಸಂಜೆ ಹೋಗಿ ನೋಡಿದರೆ ಒಂದೂ ಇಲ್ಲ. ಸೂರಕ್ಕಿಗಳು, ಇರುವೆಗಳು ಮಕರಂದದ ಆಸೆಗೆ ಪರಗಸ್ಪರ್ಶ ನಡೆಸಿ ದ ನಂತರ ಹೂವಿನ ಮೇಲೆ ಡಿಸ್ಕ್ ನಂತಿದ್ದ ಕೇಸರಗಳ ಗುಚ್ಛ ಕೆಂಪಗಾಗಿ ತೊಟ್ಟುಕಳಚಿ ಕೆಳಗೆ ಬಿದ್ದುಬಿಟ್ಟಿದೆ. ಅಂಡಾಶಯ ಮಾತ್ರ ತೊಟ್ಟಿಗೆ ಅಂಟಿಕೊಂಡಿತ್ತು.

ಬೇಸಿಗೆ ಕಳೆದು ಮುಂಗಾರು ಮುಗಿದು ಆಗಸ್ಟ್ ತಿಂಗಳಿಗೆ ಈ ಗೌಜಲ ಮರದ ಕಾಯಿಗಳು ಹಣ್ಣಾದಾಗ ನಮ್ಮ ತೋಟದಲ್ಲಿ ಒಂದು ಹೆಂಡದಂಗಡಿಯೇ ಓಪನ್ ಆಗುತ್ತದೆ. ಸುತ್ತಮುತ್ತ ಇರುವ ಗಿರಾಕಿಗಳೆಲ್ಲ ಗೌಜಲ ಹಣ್ಣಿನ ಹುಳಿಹುಳಿ ಹೆಂಡದ ಪರಂಗಿ ಹಣ್ಣಿನಂತಹ ವಸನೆಯನ್ನು ಗ್ರಹಿಸಿ ಹುಡುಕುತ್ತಾ ಬರುತ್ತವೆ. ಈ ಗೌಜಲ ಹಣ್ಣಿನ ಸವಿಯನ್ನು ಸವಿಯಲು ಜಿಂಕೆ, ಮುಳ್ಳಂದಿ, ಕಾಡಂದಿಗಳು ನಮ್ಮ ತೋಟಕ್ಕೆ ಲಗ್ಗೆ ಇಡುತ್ತವೆ. ಇಪ್ಪತ್ತು ಅಡಿ ಎತ್ತರಕ್ಕೆ ನೇರವಾಗಿ ಬೆಳೆಯುವ ಈ ಮರದ ಕಾಯಿ ತುಂಬ ನಾರಿನಿಂದ ಕೂಡಿದೆ. ಹಣ್ಣಿನಲ್ಲಿ ಹಲವು ಬೀಜಗಳಿರುತ್ತವೆ.



ಹಣ್ಣಾದ ಗೌಜಲದಹಣ್ಣು ಮಾಗಿ ಹೆಂಡವಾಗುತ್ತದೆ. ಈ ಹಣ್ಣುಗಳನ್ನು ಸಮಾರಾಧನೆ ಮಾಡಿ. ನಶೆ ಏರಿ ನಮ್ಮ ಪುಟ್ಟನನ್ನು ನಾಚಿಸುವಂತೆ ತೂರಾಡುತ್ತಾ ಸಾಗುವ ಕಾಡುಹಂದಿಯ ನಡೆಯನ್ನು ನೋಡಲು ಬಲುಚಂದ. ಗುರುಸಂತಪ್ಪನ ಪ್ರಕಾರ ಈ ಗೌಜಲ ಮರದ ಚಕ್ಕೆಗೆ ಬಲು ಔಷಧಿ ಗುಣವಿದೆಯಂತೆ. ದನ-ಕರುಗಳಿಗೆ ಗಾಯವಾದರೆ ಈ ಮರದ ಚಕ್ಕೆಯ ಪುಡಿಯನ್ನು ಔಷಧಿಯಾಗಿ ಬಳಸುತ್ತರಂತೆ. “ಕಾಡಾಗ ಆನೆಗ್ಳು ಈ ಗೊಜ್ಲದಣ್ಣು ಗಳನ್ನು ತರ್ದು ತರ್ದು ತಿನ್ಕೋತಾವೆ” ಎಂದು ಕಾಡು ಪೂಜಾರರ ಹಿರೀಕ ಕಾಡುಸಿದ್ದನು ವಿವರಿಸಿದನು.

ಜೇನ್ನೊಣಗಳಿಗೆ ಮಕರಂದವನ್ನು ಕುಡಿಸಿ ಅವುಗಳಿಂದ ಪರಾಗಸ್ಪರ್ಶ ಕ್ರಿಯೆ ಮಾಡಿಸಿಕೊಂಡು, ಹೆಂಡದ ನಶೆಬರಿಸಿ ಪ್ರಾಣಿಗಳಿಂದ ಬೀಜ ಪ್ರಸಾರ ಮಾಡಿಸಿಕೊಳ್ಳುವ ಈ ಗೌಜಲ ಮರಗಳು ಇತ್ತೀಚೆಗೆ ತುಂಬ ಕಡಿಮೆಯಾಗುತ್ತಿವೆ. ಕಾರಣ ಹುಡುಕಬೇಕಿದೆ.



# ನಾಗನ ಕ್ಷಮಾಧಾನ

ನಮ್ಮ ಮನೆಯ ಮುಂದೆ ಇರುವ ದೊಡ್ಡೇ ಗೌಡರ ಹತ್ತೆಕ್ರೆ ಮಾವಿನ ತೋಟ. ನಮ್ಮ ಮನೆಯ ಸುತ್ತಮುತ್ತಲೂ ಇರುವ ಆಲದ ಮರ, ಹಲಸಿನ ಮರ, ಬೇವಿನ ಮರ, ಮುಂತಾದ ಮರಗಳು ಈ ಜಾಗವನ್ನು ಒಂದು ಸಣ್ಣ ಕಾಡನ್ನಾಗಿಯೇ ಮಾಡಿ ಬಿಟ್ಟಿವೆ. ಇದನ್ನು ಕಾಡೆಂದೇ ನಂಬಿ ಬಂದ ಅದೆಷ್ಟೋ ನವಿಲು, ಕಾಡುಕೋಳಿ, ಹಂದಿಗಳು ನಮ್ಮೂರಿನ ಜನರ ಬಾಯಿಗೆ ಒಳ್ಳೆಯ ರುಚಿ ತೋರಿಸಿ ಮಣ್ಣಾಗಿ ಹೋಗಿವೆ. ಈ ಸುಳ್ಳು ಕಾಡಿನ ಮಧ್ಯದಲ್ಲಿರುವ ಎರಡು ಜಗುಲಿಗಳನ್ನೊಳಗೊಂಡ ಹೆಂಚಿನ ಮನೆಯು ಅದೆಷ್ಟೋ ಜಾತಿಯ ಹುಳುಗಳಿಗೆ, ಕಪ್ಪೆಗಳಿಗೆ, ಕಪ್ಪೆಗಳನ್ನು ಅರಸುತ್ತಾ ಬರುವ ಹಾವುಗಳಿಗೆ, ಸಹಸ್ರಪಡಿಗಳಿಗೆ, ಚೇಳು ಮುಂತಾದ ಕೀಟಗಳಿಗೆ ಅತಿಥಿ ಗೃಹವಾಗಿಬಿಟ್ಟಿದೆ. ಕಪ್ಪೆಗಳನ್ನು ಬೇಟೆಯಾಡಿ ನಿಧಾನವಾಗಿ ನುಂಗುತ್ತಿರಬೇಕಾದರೆ ನಮ್ಮ ಕಣ್ಣಿಗೆ ಬಿದ್ದರಂತು ಅಷ್ಟೆ ಎರಡೇ ಏಟು ' ಕೇಲ್ ಕಥಮ್ ', ಬಾಯಿಯಲ್ಲಿರುವ ತುತ್ತನ್ನು ಬಿಸಾಡಿ ಓಡದ ಹಾವು ಸುಲಭವಾಗಿ ನಮಗೆ ತಲೆಯೊಡ್ಡಿ ಕೊಡುವ ಲಾತಕ್ಕೆ ಸಾಯುತ್ತಿತ್ತು.




ಅಂದು ಸಾಯಂಕಾಲ ಮುಂಗಾರು ಮಳೆ ಚೆನ್ನಾಗಿ ಬಂದು ಭೂಮಿ ತಂಪಾಗಿತ್ತು. ವಾತಾವರಣ ಶೀತವಾಗಿತ್ತು. ಕಪ್ಪೆಗಳು ತಮ್ಮ ಸಂಗಾತಿಗಳನ್ನು ಹುಡುಕಲು ಬಾರಿಸುತ್ತಿದ್ದ ನಾದವು ಆಕಾಶ ಮುಟ್ಟುತ್ತಿತ್ತು. ಕರೆಂಟ್ ಇಲ್ಲದಿದ್ದುದರಿಂದ ಚಳಿ ತಾಳಲಾರದೆ ಬೇಗ ಮಲಗೋಣವೆಂದು ಅಮ್ಮ ಅಡುಗೆ ಕೆಲಸವನ್ನು ಬೇಗ ಬೇಗ ಮಾಡುತ್ತಿದ್ದರು. ಇನ್ನು ಮನೆಯಲ್ಲಿ ಉಳಿದಿದ್ದ ನಾನು, ಅಕ್ಕ, ಅಣ್ಣ ಒಲೆಯ ಬಳಿ ಬಿಸಿಕಾಯಿಸಿಕೊಂಡು ಅಲ್ಲೇ ಆಟವಾಡುತ್ತಿದ್ದೆವು. ಆದರೂ ಅಡುಗೆ ರೆಡಿಯಾಗಿ ಊಟ ಮಾಡುವಷ್ಟರಲ್ಲಿ ರಾತ್ರಿಯೇ ಆಗಿತ್ತು. ಊಟ ಮುಗಿಸಿ ಹೊರಗೆ ತಿರುಗಾಡಿಕೊಂಡು ಬರಲು ಹೋಗಿದ್ದ ಅಣ್ಣನು ಜಗುಲಿಗೆ ಹೋಗುವಷ್ಟರಲ್ಲಿಯೇ ಸಡನ್ನಾಗಿ 'ಹಾವು. . . . . . ಹಾವು. . . . . . . ! ' ಎಂದು ಚೀರಿಕೊಂಡು ಮನೆಗೆ ಓಡಿ ಬಂದ. ಎಲ್ಲರ ಊಟದ ತಟ್ಟೆಗಳನ್ನು ಎತ್ತುತ್ತಿದ್ದ ಅಮ್ಮ ಮಲಗಿದ್ದ ನಾನು ಅಕ್ಕ ಅವನ ಕೂಗನ್ನು ಕೇಳಿ ಅವನ ಬಳಿ ಓಡಿ 'ಎಲ್ಲೋ. . . . ?ಎಲ್ಲೋ . . . .? 'ಎಂದರು ಅಮ್ಮ 'ಇಲ್ಲೇ ಮೆಟ್ಲು ಮೇಲೆ ಮಲ್ಗಿತ್ತು, ತುಳ್ದೆ . ನಾನು ರಬ್ಬರ್ ತರ ಇತ್ತು ' ಎಂದ ಅಣ್ಣ ' ಈ ಕತ್ಲಲ್ಲಿ ಏನೋ ಕಾಣಿಸ್ತು ನಿಂಗೆ ಯಾವ್ದೋ ಕೋಲನ್ನೋ , ಹಗ್ಗವನ್ನೋ ತುಳ್ದು ಹಾವಂತಾನೇ ನಡ್ಯೋ ಮಲ್ಕೋ ಸುಮ್ನೆ ' ಎಂದು ಅಮ್ಮ ಗದರಿದರು. ಆದರೂ ಅವರ ಮಾತನ್ನು ಕೇಳದ ಅಣ್ಣ 'ಇಲ್ಲ ಇಲ್ಲ ಇಲ್ಲೆ ಅದೇ ಹಾವೇ ಅದು' ಎಂದ 'ಸರಿ ದೀಪ ಎತ್ಕೋ ಬಾರೆ ನೋಡೋಣ ಹಾವು ಸಿಗ್ಗಿದ್ರೆ ಮಾಡ್ತೀನಿ ಇವನ್ಗೆ' ಎಂದು ಅಕ್ಕನನ್ನು ದೀಪ ತರಲು ಅಮ್ಮ ಹೇಳಿದಾಗ ಅಕ್ಕನು ' ಹ್ಞೂ . . . . ಹ್ಞು ಭಯ ಆಯ್ತದೆ




ನಾನ್ ಹೋಗಲ್ಲ' ಎಂದುದಕ್ಕೆ ಅಮ್ಮ ಎಲ್ಲರನ್ನೂ ಬೈಯುತ್ತಾ ಒಳಗಡೆ ಹೋಗಿ ದೀಪ ತಂದು ಸುಮಾರು ಅರ್ಧ ಘಂಟೆ ಹುಡುಕಿದರೂ ಹಾವು ಸಿಗದಿದುದ್ದಕ್ಕೆ 'ಎಲ್ಲಪ್ಪ ಹಾವು, ನಡಿ ಮಲ್ಕೋ ಹಾವು ಇಲ್ಲ ಗೀವು ಇಲ್ಲ' ಎಂದು ದೀಪ ಹಿಡಿದುಕೊಂಡು ಮನೆಯ ಒಳಕ್ಕೆ ಹೋಗುತ್ತಿದ್ದರು ಆದರೂ ಅಣ್ಣನು ನಾವು ಹುಡುಕದೆ ಇದ್ದ ಜಗುಲಿಯ ಮೇಲಿದ್ದ ರೂಮನ್ನು ತೋರಿಸಿ 'ಹಾವು ರೂಮ್ ನಲ್ಲಿ ಇರ್ಬೇಕು' ಎಂದ 'ಸರಿ ನಡ್ಯಪ್ಪ ಅದುನ್ನೂ ನೋಡಿ ಬರೋಣ ' ಎಂದು ರೂಮಿನ ಕಡೆ ಹೊರಟರು. ರೂಮನ್ನು ಒಂದು ರೌಂಡ್ ಹೊಡೆದು ದೀಪವನ್ನು ಬಾಗಿಲ ಹಿಂದೆ ತಂದಾಗ ಸುರುಳಿ ಸುತ್ತಿಕೊಂಡು ಮಲಗಿದ್ದ ಹಾವು 'ಬುಶ್ . . . .' ಎಂದು ಹೆಡೆ ಎತ್ತುದನ್ನು ಕಂಡ ಎಲ್ಲರೂ ಆಚೆ ಓಡಿದೆವು.

ಅದರ ಬುಸುಗುಡುವ ಸದ್ದನ್ನು ಕೇಳಿ ಹೆದರಿದ್ದ ನಾವು ರೂಮಿನ ಕಡೆ ಸಹ ಹೋಗದೆ ಊರಿನಲ್ಲಿರುವ ದೊಡ್ಡಪ್ಪನನ್ನು ಕರೆತರಲು ಓಡಿದೆವು ಹಾವು ಎಂಬುದನ್ನು ಕೇಳಿ ಅವರು ಹೊಡೆಯಲು ಟಾರ್ಚ್, ದೊಣ್ಣೆ , ಬರ್ಜಿ , ಬಂದೂಕು ಎಲ್ಲವನ್ನೂ ತೆಗೆದುಕೊಂಡು ಬಂದರು. ಅವರ ಆಯುಧಗಳನ್ನು ಕಂಡ ಅಮ್ಮನು 'ಪಸ್ಟು ಯಾವ್ ಹಾವು ಅಂತ ನೋಡ್ರಿ ನಾಗ್ರಾವ್ ಆದ್ರೆ ಹೊಡೆಯೋದು ಬ್ಯಾಡ ,ಓಡಿಸ್ ಬಿಡ್ರಿ ' ಎಂದರು ಹಾವು ಬಾಗಿಲ ಹಿಂದೆ ಇದ್ದುದರಿಂದ ಹಾವು ಕಾಣಲೆಂದು ದೊಡ್ಡಪ್ಪನು ಬಾಗಿಲನ್ನು ತೆಗೆದು ಮೆಲ್ಲನೆ ಪಕ್ಕಕ್ಕೆ ಇಡುವಾಗ ಸ್ವಲ್ಪ ಶಬ್ಧವಾದುದ್ದನ್ನು ಕೇಳಿಸಿಕೊಂಡ ಹಾವು ಬುಶ್ ಎಂದು ಹೆಡೆ ಎತ್ತುದ್ದನ್ನು ಕಂಡು 'ನಾಗರ ಹಾವೇ ಇದು ' ಎಂದರು ದೊಡ್ಡಪ್ಪ 'ಅಂಗಾದ್ರೆ ವಡ್ಯೋದು ಬ್ಯಾಡ ನಾಗ್ರಾವು ನಮ್ಮನೆ ದೇವ್ರು ಓಡಿಸ್ ಬುಡ್ರಿ ' ಎಂದರು ಅಮ್ಮ . ದೊಡ್ಡಪ್ಪನು ಸುಮಾರು ಅರ್ಧ ಘಂಟೆ ಪ್ರಯತ್ನಿಸಿದರೂ ಹಾವು ಭುಸುಗುಡುತ್ತಾ ಭಯದಿಂದ ಹೊರಗೆ ಬರದೆ ಅಲ್ಲೇ ಮಲಗಿದ್ದುದನ್ನು ನೋಡಿ 'ನಮ್ಮ ಮನೆ ದೇವರೇ ನಮ್ಮ ಯಾವುದೋ ತಪ್ಪನ್ನು ನೆನ್ಪಿಸಕ್ಕೆ ಬಂದಿರ್ಬೇಕು ಪೂಜೆ ಮಾಡಿ ಮಲ್ಕೋಳನ ನಡಿರಿ ' ಎಂದು ಗಂಧದ ಕಡ್ಡಿಗಳನ್ನು ತಂದು 'ನಾವು ನಿನ್ನ ಕ್ಷೇತ್ರಕ್ಕೆ ಐದು ವರ್ಷ ತಪ್ದೆ ಬರ್ತೀವಿ ಸಾಮೀ ನಮ್ಮ ತಪ್ಪುಗಳನ್ನೆಲ್ಲಾ ಹೊಟ್ಟೆಗೆ ಹಾಕಿಕೊಂಡು ನನ್ನ ಮಕ್ಕಳನ್ನ ಕಾಪಾಡು' ಎಂದು ಪ್ರಾರ್ಥಿಸಿ ಎಲ್ಲರ ಕೈಲೂ ಹಾವಿಗೆ ದೂರದಿಂದಲೇ ನಮಸ್ಕರಿಸಿ ಹೋಗಿ ಮಲಗಿದೆವು. ಬೆಳಗ್ಗೆ ಎದ್ದು ಬಂದು ನೋಡುವಷ್ಟರಲ್ಲಿ ಹಾವು ಹೊರಟೇ ಹೋಗಿತ್ತು.

ಅಂದು ನಾನು ಸಹ ಹಾವು ಹೊರಗೆ ಹೋದದ್ದು ನಮ್ಮ ಪ್ರಾರ್ಥನೆಯಿಂದಲೇ ಎಂದು ನಂಬಿದ್ದೆ ಆದರೆ ದೊಡ್ಡವನಾದಂತೆ ನಾವು ಅದನ್ನು ತುಂಬಾ ಗಾಭರಿ ಪಡಿಸಿದ್ದರಿಂದ ಅದು ಮನೆಯಿಂದ ಹೊರಗೆ ಬರಲಿಲ್ಲ ಎಂದೆನಿಸಿತು. ಭಾರತದಲ್ಲಿರುವ ಸಂಸ್ಕೃತಿಗಳು ಎಷ್ಟು ಆಳವಾಗಿ ಬೇರೂರಿದೆ ಎಂದರೆ ಈ ಸಂಸ್ಕೃತಿಗಳು ನಮ್ಮನ್ನು ಬಿಡಲು ಇನ್ನೂ ತುಂಬಾ ಶತಕಗಳೇ ಬೇಕಾಗಬಹುದು. ಈ ಸಂಸ್ಕೃತಿಗಳಿಂದ ಪರಿಸರದ ರಕ್ಷಣೆಗೂ ತುಂಬಾ ಉಪಯೋಗಗಳಿವೆ ಕೆಲವು ಮರಗಳನ್ನು, ಹಾವುಗಳನ್ನು, ಪ್ರಾಣಿಗಳನ್ನು , ಸ್ಥಳಗಳನ್ನು ಪೂಜಿಸುವುದರಿಂದ ಪರೋಕ್ಷವಾಗಿ ಪರಿಸರದ ರಕ್ಷಣೆಯೂ ಆಗುತ್ತಿದೆ.



# ಹಕ್ಕಿ ಲೋಕ

* ಬನ್ನೇರುಘಟ್ಟದಾಗ ಬಣ್ಣದ ಕೊಕ್ಕರೆ!

ವೈಜ್ಞಾನಿಕ ಹೆಸರು: *Mycteria leucocephala*

ಇಂಗ್ಲೀಷ್ ಹೆಸರು: **Painted Stork**

ಬೆಂಗಳೂರಿನ ದಕ್ಷಿಣಕ್ಕಿರುವ ವಾಜರಗುಡಿಸಲು ಎಲೆ ಉದುರುವ ಕುರುಚಲು ಕಾಡು, ಬೇಸಿಗೆಯಲ್ಲಿ ಕಾಡೆಲ್ಲ ಒಣಗಿ ಬೋಳಾಗಿ ಬೆಂಕಿಯಿಂದ ಹಾರಿದ ಕರಿಬೂದಿಯಂತೆ ಕರ್‍ರಗೆ ಕಂಡು ಬರುವ ಕಾಡಿನ ಪಕ್ಕದಲ್ಲಿರುವ ಒಂದು ಹಳ್ಳಿ, ಒಂದೇ ಬೀದಿ. . .ಒಂಧ್ಹತ್ತು ಮನೆಗಳಿರಬೇಕು. ಊರಿಗೆಲ್ಲ ದೊಡ್ಡದಾದ ಏಕೈಕ ಪಡಸಾಲೆ ಮನೆಯ ಮುದುಕನಾದ ತಿಮ್ಮನ ಏಕೈಕ ಮಮ್ಮೊಗನೆ ತೀಟೆಕುಮಾರ. ಯಾವುದೇ ಮರವಾಗಲಿ ಸದ್ದಿಲದೆ ಸರಾಗವಾಗಿ ಏರಿ! ಜರ್ . . .ಎಂದು ಇಳಿಯುವುದರಲ್ಲಿ ಬಹಳ ಪರಿಣಿತ ಬಿಡಿ!. ಚಿಕ್ಕಂದಿನಲ್ಲಿ ತುಂಬ ಪಟಿಂಗ, ಮನೆಯಲ್ಲಿ ಯಾರಿಗೂ ಸಿಗುತ್ತಿರಲ್ಲಿಲ್ಲ ಕಾಡು-ಮೇಡು, ಕೆರೆ-ಕುಂಟೆಗಳೆನ್ನದೆ ಎಲ್ಲೆಂದರಲ್ಲಿ ಹಕ್ಕಿಗಳನ್ನು ಹುಡುಕುತ್ತಾ ತಿರುಗಾಡುವ ಅಲೆಮಾರಿ.

ತೀಟೆಕುಮಾರ ಚಿಕ್ಕಂದಿನಲ್ಲಿ ತೀಟೆ, ಆದರೆ ಎರಡು ಮಕ್ಕಳ ತಂದೆಯಾಗಿ ಇಗಲೂ ತೀಟೆ ಎಂದರೆ ಯಾರಿಗೆ ತಾನೆ ನಗು ಬರುವುದಿಲ್ಲ ಹೇಳಿ!, ಎಲ್ಲಾದರೂ ಮೊಲ, ಬೆಳವ, ನವಿಲು, ಕಾಡುಕೋಳಿಯಂತಹ ಗೂಡು ಸಿಕ್ಕರೆ ಸಾಕು, ಆ ಮರಿಗಳನ್ನು ಕದ್ದುತಂದು ಮನೆಯಲ್ಲಿ ಸಾಕುತ್ತಾನೆ. ಕೆಲವು ವೇಳೆ ಯಾವುದೇ ಕಾಡುಹಕ್ಕಿ-ಪ್ರಾಣಿಗಳು ಸಿಗದಿದ್ದರೆ, ತನ್ನ ಕಯಾಲನ್ನು ತೀರಿಸಿಕೊಳ್ಳಲು ಪಾರಿವಾಳಗಳನ್ನು ತಂದು ಸಾಕಿ ಆಟವಾಡುತ್ತಾ ಕೂರುತ್ತಾನೆ.

ಮೊನ್ನೆಯಷ್ಟೇ ಶಿವಮೊಗ್ಗದ ಕಡೆ ಹೋಗಿದ್ದನಂತೆ, ಬರಬೇಕಾದರೆ ದಾರಿಯಲ್ಲಿ ಮಂಡಗದ್ದೆ ಪಕ್ಷಿಧಾಮ ಎಂಬ ಬೋರ್ಡನ್ನು ನೋಡಿ ಕಾರನ್ನು ತಿರುಗಿಸಿ ನೇರಾ ಮಂಡಗದ್ದೆ ಕಡೆ ಹೊರಟನಂತೆ, ಎಷ್ಟೊಂದು ತರತರ ಹಕ್ಕಿಗಳನ್ನು ನೋಡಿ ತುಂಬ ಖುಷಿಯಾಗಿ, ಇಂತಹದೊಂದು ಹಕ್ಕಿಯನ್ನು ಮನೆಯಲ್ಲಿ ಸಾಕಿದರೆ ಹೇಗೆ ಎಂದು ಮನಸ್ಸಿನಲ್ಲಿಯೇ ಯೋಚಿಸಿದ್ದಾನೆ. ಇವನು ಎಂದೂ ನೋಡದ ಹಾವಕ್ಕಿ, ಹೆಜ್ಜಾರ್ಲೆ, ಕತ್ತಲ ಗುಪ್ಪಿ, ಗೋದ್ಬಾದ, ಬಾಯ್ಕಳಕ, ಕರಿಕೆಂಬರಲು, ಬಿಳಿಕೆಂಬರಲು, ಬಣ್ಣದ ಕೊಕ್ಕರೆ, ಬಾತುಗಳಂತಹ ಬಹಳ ಹಕ್ಕಿಗಳನ್ನು ಅಲ್ಲಿ ನೋಡಿದ್ದಾನೆ. ಜೊತೆಯಲ್ಲಿದ್ದ ಗೆಳೆಯನಿಗೆ "ನೋಡು ಆ ಹಕ್ಕಿ ಎಷ್ಟ್ ಚನ್ನಾಗಿದೆಯಲ್ಲ?" ಎಂದು ಹೇಳಿದ.



© WCG


ಈ ಹಕ್ಕಿಗಳು ನದಿಯ ಇಕ್ಕೆಲಗಳಲ್ಲಿ ಬೆಳೆದ ಮರಗಳ ಮೇಲೆಲ್ಲ ಕಡ್ಡಿ, ಎಲೆ ಮತ್ತು ಒಣಹುಲ್ಲನ್ನು ಸೇರಿಸಿ ಬಟ್ಟಲಿನಾಕಾರದ ಗೂಡುಗಳನ್ನು ಮಾಡಿಕೊಂಡಿವೆ, ಶುಭ್ರವಾದ

ಆಗಸದಲ್ಲಿ ಬಣ್ಣದ ಕೊಕ್ಕರೆಗಳು ತನ್ನ ಮರಿಗಳಿಗೆ ಕ್ಯಾ. . .ಕ್ಯಾ. . .ಕ್ಯಾ. . .ಎಂದು ಕೂಗಾಡುತ್ತಾ ಆಹಾರವನ್ನು ಬಾಯಲ್ಲಿ ಕಚ್ಚಿಕೊಂಡು ಹರಿಯುವ ನದಿಯ ಮೇಲೆ ಹಾರಿ ಬಂದು ಮರದ ಮೇಲಿರುವ ಗೂಡುಗಳಲ್ಲಿ ಮರಿಗಳಿಗೆ ಕುಟುಕನ್ನು ನೀಡುತ್ತವೆ. ಮಿಂಚುಳ್ಳಿಗಳಂತೂ ನದಿಯ ನೀರಿಗೆ ವಾಲಿರುವ ಕಡ್ಡಿಗಳ ಮೇಲೆ ಕುಳಿತು ಮೀನು ಶಿಕಾರಿಗಾಗಿ ಸೂರ್ಯನ ಬೆಳಕಿನ ಕಿರಣ ಮತ್ತು ನೀರಿನಲ್ಲಿ ಕಾಣುವ ಮೀನನ್ನು ತನ್ನ ಮನಸ್ಸಿನಲಿಯೇ ಗಣಿತದ ಲೆಕ್ಕಗಳನ್ನು ಮಾಡುತ್ತಾ ತಲ್ಲೀನವಾಗಿವೆ . ಇನ್ನೂ ಕತ್ತಲೆ ಗುಪ್ಪಿಗಳಂತು ನದಿಯ ದಂಡೆಯ ಮೇಲೆಕುಳಿತು ಬೇಟೆಗಾಗಿ ಶಿವನ ಜಪಮಾಡುತ್ತಿವೆ!, ಮರದ ಮೇಲೆ ಕುಟುರು ನೀಡುತ್ತಿದ್ದ ಬಣ್ಣದ ಕೊಕ್ಕರೆಯನ್ನು ತೋರಿಸುತ್ತಾ "ಲೋ, ಆ ಹಕ್ಕಿ ನೋಡೋ ಹೇಗಿದೆ. . ! ತಲೆ ನೋಡು ಬಂಡ್ಲಿ ತರ ಆಯ್ತು!" ಎಂದನಾ ತೀಟೆ. ಆ ಹಕ್ಕಿಯ ತಲೆ ಬಂಡ್ಲಿ ಸರಿ ಆದರೇ ತಲೆ ಕೆಂಪು ಮಿಶ್ರಿತ ಹಳದಿ ಬಣ್ಣ ಹೊಂದಿದೆ. "ನೋಡು ಬಾಲದ ತುದಿಯಲ್ಲಿ ಕೆಂಪು ಬಣ್ಣ ಇದೆ! ಎಷ್ಟ್ ಚೆನ್ನಾಗಿದೆ ಆ ಹಕ್ಕಿ" ಎಂದು ಗೆಳೆಯನಿಗೆ ಹೇಳಿದ.

ಆ ಬಣ್ಣದ ಕೊಕ್ಕರೆ ಹದ್ದಿಗಿಂತ ದೊಡ್ಡದು, ಬಿಳಿಯ ಬಣ್ಣದ ಪಕ್ಷಿ, ಬಿಳಿ ರೆಕ್ಕೆಯ ಮೇಲೆ ಕಪ್ಪುಪಟ್ಟಿಗಳಿವೆ. ಭುಜ, ರೆಕ್ಕೆಯ ಅಂಚು ಮತ್ತು ಮೋಟು ಬಾಲವು ತಿಳಿ ಗುಲಾಬಿ ಬಣ್ಣ. ಬೇಟೆಗೆ ಸುಲಭವಾದ ಬಲಿಷ್ಠ ಉದ್ದನೆಯ ಹಳದಿ ಬಣ್ಣದ ಕೊಕ್ಕು. ಕಾಲುಗಳು ನೀಳವಾದ ಗುಲಾಬಿ ಬಣ್ಣದ್ದು.

ತೀಟೆಕುಮಾರನ ಕಣ್ಣಿಗೆ ಬಿದ್ದ ಮೇಲೆ ಮುಗಿಯಿತು! ಗೆಳೆಯನಿಗೆ " ನೀನು ಇಲ್ಲೇ ಇರೋ  ಒಂದು ನಿಮಿಸ ಬಂದೆ" ಎಂದು ಹೇಳಿ  ಹೊರಟವನು ಎಷ್ಟೊತ್ತಾದರೂ  ಬರಲೇ ಇಲ್ಲ. ಗೆಳೆಯ ಕಾದು ಕಾದು ಸಾಕಾಗಿ ಹೋಗಿ ಕಾರಿನಲ್ಲಿ ಕುಳಿತ್ತಿದ್ದ. ಕೈಕಾಲುಗಳನ್ನು ಪರಚಿಕೊಂಡು ತಲೆದಿಂಬಿನ ತರ ಹಕ್ಕಿಯನ್ನು ಕಂಕುಳಲ್ಲಿ ಇಟ್ಟುಕೊಂಡ ಗಸ್ತುಕಾಯುತ್ತಿದ್ದ ಫಾರಿಷ್ಟ್ರಿನವರ ಕಣ್ಣುತಪ್ಪಿಸಿಕೊಂಡು ಬಂದ ಕುಮಾರನು, ಕಾರಿನ ಡಿಕ್ಕಿಯಲ್ಲಿ ರೆಕ್ಕೆ, ಕಾಲುಗಳನ್ನು ದಾರದಲ್ಲಿ ಕಟ್ಟಿಟ್ಟು, ನೇರ  ಊರಿನ ಕಡೆ ಬಂದುಬಿಟ್ಟ. ಸದ್ಯ ಅವನ ಅದೃಷ್ಟ ಯಾವ ಚೆಕ್  ಪೋಸ್ಟಿನಲ್ಲು ಸಿಕ್ಕಿಹಾಕಿಕೊಳ್ಳದೆ ಬಂದಿದ್ದಾನೆ!.  ಅವನಿಗೇನು ಗೊತ್ತು ಈ ಬಣ್ಣದ ಕೊಕ್ಕರೆ ಅಪಾಯದಂಚಿನ ವನ್ಯಜೀವಿಗಳ ಷಡುಲ್ ನಾಲ್ಕಲ್ಲಿ ಸಂರಕ್ಷಿಸಲ್ಪಟ್ಟಿದೆ ಎಂದು!. ಹಕ್ಕಿ ಬಣ್ಣ ಬಣ್ಣದಾಗಿತ್ತು ಹಿಡಿದುಕೊಂಡು ಬಂದಿದ್ದಾನೆ.


ನೀವೆ ಒಂದ್ ಸರಿ ಯೋಚನೆ ಮಾಡಿ ಶಿವಮೊಗ್ಗದ ಮಂಡಗದ್ದೆ ಎಲ್ಲಿ!, ಬೆಂಗಳೂರಿನ ಬನ್ನೇರುಘಟ್ಟ ಎಲ್ಲಿ!, ಬರೊಬ್ಬರಿ ಮೂನ್ನೂರು ಕಿಲೋಮೀಟರ್ ದೂರ. ಅದರ ಆವಾಸವೇ ಬೇರೆ, ಇವನು ತಂದಿರುವ ಆವಾಸವೇ ಬೇರೆ. ಈ ಬಣ್ಣದ ಕೊಕ್ಕರೆಗಳಿಗೆ ಬನ್ನೇರುಘಟ್ಟ ಸೂಕ್ತ ಆವಾಸವಲ್ಲವೇ ಅಲ್ಲ, ಈ ಕೊಕ್ಕರೆಗಳು ಅಪ್ಪಿ-ತಪ್ಪಿಯಾದರು ಕೂಡ ಈ ಕಡೆ ಬರೋದಿಲ್ಲ ಬಿಡಿ!. ಇದೆಲ್ಲ ತೀಟೆಕುಮಾರನಿಗೆ ಹೇಗೆ ತಿಳಿಯ ಬೇಕು, ತಂದು ಎರಡು-ಮೂರು ದಿನಗಳಾಗಿರಬೇಕು. ಮನೆಯ ಮುಂದೆ ಕಾಲಿಗೆ ದಾರಕಟ್ಟಿ ಆಟವಾಡಿಸುತ್ತಿದ್ದ, ನೀವೆ ಹೇಳಿ ಎರಡು ಮಕ್ಕಳ ತಂದೆ ಬಹಳ ತೀಟೆ ಎಂದರೆ ನಗು ಬರುತ್ತದೋ ಇಲ್ಲವೋ!. ಹಕ್ಕಿ ಹೇಗೋ ಮಾಡಿ ದಾರ ಕಳಚಿಕೊಂಡು



ಹಾರಲಾಗದೆ ಹಾರಿ ಅರಳಿಮರದ ತುದಿಯನ್ನು ಸೇರಿ. ಇವರಿಂದ ಕಾದಿದ್ದ ಪ್ರಾಣಪಾಯದಿಂದ ಬಚಾವಾಯಿತು. ಆದರೆ ಈಗ ಆಗಸದಲ್ಲಿ ಹಾರಾಡಿಕೊಂಡಿದ್ದ ಹದ್ದುಗಳು. ಈ ಬಣ್ಣದ ಕೊಕ್ಕರೆಯನ್ನು ನೋಡಿ ಆಶ್ಚರ್ಯದಿಂದ ಬಂದು ಕಚ್ಚತೊಡಗಿದವು! ಕ್ರಾ. . .ಕ್ರಾ. . .ಕ್ರಾ. . .ಎಂದು ಅರಚುತ್ತಾ ಹದ್ದುಗಳಿಂದ ತಪ್ಪಿಸಿಕೊಳ್ಳಲು ಆಗದೆ ಅಸಹಾಯಕತೆಯಿಂದ ಕಿರುಚುತ್ತಾ ಕುಳಿತ್ತಿತ್ತು.

ಇದ್ದನ್ನು ನೋಡಿದ ಮಾದೇವ ಕಲ್ಲುಗಳಿಂದ ಹದ್ದುಗಳನ್ನು ಹೊಡೆದು ಓಡಿಸಿ "ಇದ್ಯಾವುದು! ಹೊಸ ಪಕ್ಷಿ ಬಂದಿದೆಯಲ್ವ, ನಮ್ಮೂರ್ಗೆ" ಎಂದು ಆಶ್ಚರ್ಯದಿಂದ ತಕ್ಷಣ ನನಗೆ ಫೋನ್ ಮಾಡಿ "ಒಂದು ಹೊಸ ಹಕ್ಕಿ ಬಂದಿದೆ! ಅರಳಿ ಮರದ ಮೇಲೆ ಕುಳಿತಿದೆ. ಕೆಂಪು ತಲೆ, ಉದ್ದಕೊಕ್ಕು, ದೊಡ್ಡ ಕೊಕ್ಕರೆ ಇದ್ದಾಗಿದೆ" ಎಂದು ಹೇಳಿದ, ನನಗೆ ಸ್ವಲ್ಪ ಇರಿಸು-ಮುರಿಸು ಆಯಿತು, ನಮ್ಮೂರಿಗೆ ಹೊಸ ಹಕ್ಕಿ! ಯಾವುದು ಎಂದು ಯೋಚಿಸುತ್ತಾ ಆಗಾಗ ಈ ಗೋದ್ಬಾದ ಹಕ್ಕಿಗಳು ಬರ್ತವೆ, ವರ್ಷದಲ್ಲಿ ಎರಡು-ಮೂರು ಸಾರಿ ಕರಿಕೆಂಬರಲು ಬೇಟಿ ಕೊಟ್ಟೋಗ್ತವೆ, ಅದು ಬಿಟ್ರೇ ಬಾಯ್ಕಳಕ ಒಂದೆರಡು ಬಾರಿ ಬಂದಿದ್ದುಂಟ್ಟು. 'ಇದ್ಯಾವುದು' ಎಂದೆ "ಏ ಸರಿ ಎಲ್ಲಾ ಡೀಟೇಲಾಗಿ ಹೇಳು ಮಾರಾಯ" ಎಂದು ಕೇಳಿದೆ. ಮದೇವು ಎಲ್ಲವನ್ನು ಹೇಳಿದ. ಹಾಗ ತಿಳಿಯಿತು, ಅದು ***ಬಣ್ಣದ ಕೊಕ್ಕರೆ*** ಎಂದು. ಇಂಗ್ಲೀಷ್ನಲ್ಲಿ ***ಪೈಂಟೆಡ್ ಸ್ಟಾರ್ಕ್*** ಅಂತ ಕರೆಯುತ್ತಾರೆ. ಮಾದೇವ ಎರಡು-ಮೂರು ಪೋಟೋ ಕೂಡ ತೆಗೆದಿದ್ದ. ಅಮೇಲೆ ಎರಡು ದಿನದ ನಂತರ ತಿಳಿದಿದ್ದು ಇದು ತೀಟೆಕುಮಾರನ ಕಿತಾಪತಿ ಎಂದು!.

ಈ ಬಣ್ಣದ ಕೊಕ್ಕರೆ ತನ್ನ ಪರಿವಾರವನ್ನು ಸೇರಲು ಮೂನ್ನೂರು ಕಿಲೋಮೀಟರ್ ಹಾರಿಹೋಗಬೇಕು. ಅದು ಹೋಯಿತೋ ಇಲ್ಲವೋ ಗೊತ್ತಿಲ್ಲ, ಹೋಗಿದ್ದರೆ ಮತ್ತೆ ತನ್ನ ಪರಿವಾರದ ಸಮೇತ ಇಲ್ಲಿಗೆ ಬರಬಹುದಲ್ವ? ಎಂಬ ಮಾದೇವನ ಪ್ರಶ್ನೆಗೆ "ಅವು ಮತ್ತೆ ಬರಲು ಈ ಜಾಗ ಅವುಗಳ ಆವಾಸವಲ್ಲ ಬಿಡುಮಾರಾಯ, ಅವುಗಳ ಆವಾಸ ಆಗಿದ್ರೆ ಇದ್ಕೂ ಮೊದಲೆ ಬರತ್ತಿದ್ವು"ಎಂದೆ .






# ವಿದ್ಯಾರ್ಥಿಗಾಗಿ ವಿಜ್ಞಾನ

## * ಕೆಂಚಿರುವೆ ಪಾದ



ನಮ್ಮ ಹಿತ್ತಿಲಿನ ಮಾವಿನ ಮರದಲ್ಲಿ ಫುಟ್ಬಾಲ್ ಗಾತ್ರದ ಕೆಂಚಿರುವೆ ಗೂಡು ಕಾಣಿಸಿತು. ಮಾವಿನ ಮರಕ್ಕೆ ಕಾಯಿ ಕೀಳಲು ಬರುವ ಸ್ಕೂಲ್ ಮಕ್ಕಳಿಗೆಲ್ಲ ಈ ಗೂಡು "ನನ್ನ ತಂಟೆಗೆ ಬಂದೀಯಾ ಹುಷಾರ್!" ಎಂದು ಹೆದರಿಸುವಂತಿತ್ತು. ಅಂಚೇ ಕಡ್ಡಿ ಗಾತ್ರಕಿಂತ ತೆಳ್ಳಗಿರುವ ಈ ಕೆಂಚಿರುವೆಗಳು ಒಂದು ಕಚ್ಚಿಬಿಟ್ಟರೆ ಸಾಕು ಉರಿ ಉರಿ ಉರಿ!. ಅಷ್ಟು ಸಣ್ಣ ಗಾತ್ರದ ಕೀಟ ಇಷ್ಟು ದೊಡ್ಡ ಮಾವಿನ ಎಲೆಗಳನ್ನು ಬಗ್ಗಿಸಿ ಗೂಡು ಕಟ್ಟುವುದಾದರೂ ಹೇಗೆ? ಎಂದು ಕುತೂಹಲದಿಂದ ಗಮನಿಸಿದೆ. ತಂಡೋಪ ತಂಡವಾಗಿ ಒಬ್ಬರ ಕಾಲುಗಳನ್ನು ಇನ್ನೊಬ್ಬರು ಹಿಡಿದು ಎರಡು ಎಲೆಗಳನ್ನು ಬಗ್ಗಿಸಿಯೇ ಬಿಟ್ಟವು. ಇದನ್ನೇ ಕಾಯುತ್ತಿದ್ದ ಇನ್ನೋಂದು ತಂಡದ ಇರುವೆಗಳು ತನ್ನ ಬಾಯಿಯಲ್ಲಿ ಇನ್ನೂ ಲಾರ್ವಾ ಸ್ಟೇಜ್ ನಲ್ಲಿರುವ ಬೆಳ್ಳಗಿನ ಇರುವೇ ಮರಿಗಳನ್ನು ಬಾಯಿಯಲ್ಲಿ ಕಚ್ಚಿ ತಂದವು. ನೂರಾರು ಇರುವೆಗಳು ಎಳೆದು ಹಿಡಿದ್ದಿದ್ದ ಎರಡೂ ಎಲೆಗಳ ಅಂಚಿಗೆ ಆ ಲಾರ್ವಗಳು ಸ್ರವಿಸುವ ರೇಶ್ಮೆಯಂತಹ ನೂಲಿನಿಂದ ಅಂಟಿನಂತೆ ಅಂಟಿಸಿಬಿಟ್ಟವು .

ಇತ್ತೀಚೆಗೆ ಈ ಕೆಂಚಿರುವೆಯ ಬಗ್ಗೆ ಅದ್ಯಾಯನ ನಡೆಸಿದ ವಿಜ್ಞಾನಿಗಳ ತಂಡವು ಈ ಪುಟ್ಟ ಕೆಂಚಿರುವೆ ತನ್ನ ದೇಹದ ತೂಕಕ್ಕಿಂತ ನೂರುಪಟ್ಟು ಹೆಚ್ಚು ತೂಕದ ಭಾರವನ್ನು ಎಲೆಯ ಕೆಳಗೆ ತಲೆಕೆಳಗಾಗಿ ನಿಂತು ಎತ್ತಬಲ್ಲದು! ಎಂದು ಕಂಡುಹಿಡಿದಿದ್ದಾರೆ. ಅತ್ಯಂತ ಬಲಶಾಲಿಯಾಗಿ ಹಿಡಿದುಕೊಳ್ಳುವುದೇ ಅಲ್ಲದೆ ತುರ್ತು ಸಂಧರ್ಭದಲ್ಲಿ ತನ್ನ ಪಾದದ ಹಿಡಿತವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುತ್ತದೆ. ಎಂದು ತಾಮಸ್ ಎಂಡೈನ್ ಎಂಬ ವಿಜ್ಞಾನಿ ಕಂಡುಹಿಡಿದಿದ್ದಾರೆ.



ಮರದ ಮೇಲೆ ವಾಸಿಸುವ ಕೆಂಚಿರುವೆಗಳು ಮರದ ಮೇಲಿಂದ ಅಕಸ್ಮಾತ್ ಆಗಿ ಕೆಳಗೆ ಬಿದ್ದರೂ ಇವುಗಳಿಗೆ ಏನೂ ತೊಂದರೆ ಆಗುವುದಿಲ್ಲ. ಆದರೆ

ಮರಳಿ ಮನೆಗೆ ಹಿಂತಿರುಗಿ ಬರುವ ದಾರಿ ಗೊತ್ತಾಗುವುದಿಲ್ಲ ಅಷ್ಟೆ. ಎಲೆಗಳ ಕೆಳಗೆ ತಲೆಕೆಳಗಾಗಿ ನಿರಾಯಸವಾಗಿ ನಡೆಯುವಾಗ ಇವುಗಳ ಕಾಲಿನಲ್ಲಿರುವ ಚಪ್ಪಟ ಪಾದವು ಎಲೆ ಅಥವ ಕೊಂಬೆಗಳನ್ನು ಬಹಳ ಭದ್ರವಾಗಿ ಹಿಡಿದುಕೊಳ್ಳುತ್ತವೆ. ಆದ್ದರಿಂದ ತನಗೆ ಬೇಕಾದಾಗ ಕ್ಷಣಾರ್ಧದಲ್ಲಿ ಪ್ರತಿ ಕಾಲನ್ನು ಸಡಿಲಗೊಳಿಸಿ ಹೆಜ್ಜೆಯನ್ನು ಕಿತ್ತಿಕ್ಕಬಹುದು.ಮತ್ತು ಗಾಳಿ ಜೋರಾಗಿ ಬೀಸುವಾಗ ಈ ಇರುವೆಗಳ ಕಾಲಿನ ಹಿಡಿತವು ಹೆಚ್ಚಾಗುತ್ತದೆ.





ಈ ಕೆಂಚಿರುವೆಗಳ ಚಲನೆಯನ್ನು ಹೈಸ್ಪೀಡ್ ವಿಡಿಯೋ ತೆಗೆದು ಗಮನಿಸಿದಾಗಲೇ ವಿಜ್ಞಾನಿಗಳಿಗೆ ಗೊತ್ತಾದದ್ದು. ಆ ಪುಟಾಣಿ ಇರುವೆ ಪಾದಗಳು ತೇವಯುಕ್ತವಾಗಿವೆ ಎಂದು. ಆ ಪಾದದಲ್ಲಿನ ತೇವ ಅಂಟು ಅಲ್ಲ. ಆ ತೇವವು ಕ್ಯಾಪಿಲರಿ ಆಕ್ಷನ್ ನಿಂದಾಗಿ , ಹೇಗೆ ತೇವವಾದ ಪೇಪರ್ ಗಾಜಿಗೆ ಬಿಗಿಯಾಗಿ ಅಂಟಿಕೊಳ್ಳೂತ್ತದೋ ಅದೇ ರೀತಿ ಇರುವೆಯ ಪಾದ ಎಲೆಗೆ ಬಿಗಿಯಾಗಿ ಅಂಟಿಕೊಳ್ಳುತ್ತದೆ.

ಗಾಳಿ ಜೋರಾಗಿ ಬೀಸುವಾಗ ಇರುವೆಗಳು ತಮ್ಮ ಪಾದಗಳನ್ನು ಎರಡು ಪಟ್ಟು ಹಿಗ್ಗಿಸಿಕೊಳ್ಳುತ್ತವೆ. ಅಗಲವಾದ ಪಾದವಿದ್ದರೆ ಹಿಡಿತ ಹೆಚ್ಚಾಗುತ್ತದೆ, ಬಿಗಿಯಾಗುತ್ತದೆ. ಇತರೆ ಬೇರೆ ಜಾತಿಯ ಇರುವೆಗಳೂ ಕೂಡ ಪಾದಗಳನ್ನು ಅಗಲಿಸಿಕೊಳ್ಳುತ್ತವೆಯಾದರೂ ಈ ಕೆಂಚಿರುವೆಯಷ್ಟು ಬೇಗ ಪಾದವನ್ನು ಹಿಗ್ಗಿಸುವುದು ಕುಗ್ಗಿಸುವುದು ಮಾಡುವುದಿಲ್ಲ

ಮರದಲ್ಲಿ ಕೊಂಚ ಅಲುಗಾಟ ಶುರವಾದರೂ ಐದಾರು ಮಿಲಿಸೆಕೆಂಡಿನಲ್ಲಿ ಪಾದವನ್ನು ಹಿಗ್ಗಿಸಿ ಭದ್ರಪಡಿಸಿಕೊಳ್ಳುತ್ತದೆ.

ಇಷ್ಟು ವೇಗವಾಗಿ ನಡೆಯುವ ಈ ಅಂಟಿಕೊಳ್ಳುವ ಕ್ರಿಯೆ ನರಜೀವಕೋಶಗಳ ಕಾರ್ಯವೇಗಕಿಂತ ಹೆಚ್ಚು ವೇಗವಾದುದು!. ಆದ್ದರಿಂದ ಈ ಕೆಂಚಿರುವೆಯ ಕಾಲಿನ ಹಿಡಿತದ ಕ್ರಿಯೆ ಯಾವುದೇ ರಾಸಾಯನಿಕ ಅಥವಾ ಜೈವಿಕ ಅಲ್ಲ . ಯಾವುದೋ ಯಾಂತ್ರಿಕವಾದ ಕ್ರಿಯೆ ಎಂದು Endullen and Federche ರವರು ಇತ್ತೀಚೆಗೆ ಪ್ರತಿಪಾದಿಸಿದ್ದಾರೆ.





# ತೈಲವಿದ್ದಂತೆ ಹಣ

ತೈಲ ಇರುವ ಬಾವಿಯಲ್ಲಿ
ಹಣದ ಹೊಳೆಯೇ ಹರಿವುದು
ಆರ್ಥಿಕ ನೆಲೆಯ ನೀಡುವಲ್ಲಿ
ದೇಶ ಶಾಂತಿ ನಿಲುವುದು...!!

ಹಳ್ಳ ತೋಡಿ ಬಾವಿ ಮಾಡಿ
ಹಿಂಡಿ ಹಿಪ್ಪೆ ಮಾಡಿ ಹೀರುತ
ದೇಶದ ಸಂಪತ್ತು ಹೆಚ್ಚಿಸುವಲ್ಲಿ
ಭೂಮಿ ತಾಯಿ ನಲುಗುವಳು..!!

ತೈಲದಂತೆ ಮನುಜನಾರು
ಕಷ್ಟಗಳ ಹೊರುವನೋ
ಬೆಲ್ಲದುಂಡೆಯಾಗಿ ತಾನು
ಇರುವೆ ಮಧ್ಯೆ ನಿಲುವನು...!!!

ಎಣ್ಣೆ ಇರುವ ದೀಪದಂತೆ
ಸದಾ ಬೆಳಗುತಿರುವರು
ಮನೆಮಂದಿಗೆ ಬೆಳಕಾಗಿ
ಹೊರೆಗಳ ತಾ ಹೊರುವನು...!!

ಹಣದ ಹೊಳೆ ಹರಿದರಂತೂ
ಮನೆ-ಮನಗಳು ತಾ ಕುಣಿವವು
ಇದ್ದರೆ ಇರುವ ಬಂಧಗಳೆಲ್ಲಾ
ಇರದಿರೆ ತಾ ಕಿತ್ತು ಹರಿವವು..!!

ಮನುಜನ ಹಣ ತೈಲದಂತೆ
ಬೆಳಕಿಗೂ ಬೇಕು ತೈಲವಂತೆ
ಪ್ರಗತಿ, ಚಲನೆ ಸಕಲಕೂ ಬೇಕು
ಹಣವಿದ್ದವ ತೈಲ ಬಾವಿಯಂತೆ..!!

- ಸುಗುಣಮಹೇಶ್